# Move to hike PG medical seats stuck

Sushmi.Dey@timesgroup.com

**New Delhi:** Despite the Centre adding over 4,000 more post graduate seats from 2017 session, aspirants may have to wait for another year as uncertainty looms over proposals from several government medical colleges in Delhi stuck in red tape with the Medical Council of India (MCI).

Less than 50% of the seats requested by RML Hospital, Safdarjung Hospital and ESI-PGIMSR have been approved by the medical education regulator, whereas not a single new seat has been approved in Lady Hardinge Medical College and University College of Medical Sciences, sources said.

On the other hand, counselling for all India seats started from Tuesday, leaving candidates in a state of confusion in the absence of clarity in number of seats. Doctors say the medical education regulator has been causing unnecessary delay by seeking the same documentations again in different formats.

Photo for representation only



RED TAPE WOES

Raising concerns against the problem, several PG aspirants have together shot off a letter to Prime Minister Narendra Modi pointing at "the disconnect between the government and the bureaucracy", alleging the officers involved in the implementation of the policy are "lackadaisical" and "outrightly obstructive" in their approach.

"All the officials are going with a premise that they shall delay the implementation to such an extent that no scope shall be left, to implement this government policy from 2017 academic session," the letter said.

The health ministry had approved addition of 4,193 PG seats from 2017 to meet the rising demand for higher education as well as to increase availability of specialists across the country in the wake of emerging lifestyle diseases like cancer, diabetes and heart disorders. The 4,193 seats will come up in 71 government medical colleges across the country, taking the total number of post graduate seats available in the country to 35,117.

*For the full report, log on to www.timesofindia.com*

## Stent price cap will help save ₹4,450cr

The government said on Tuesday the price control of stents would result in annual savings of about Rs 4,450 crore for patients in the country. "Reduction of prices of stents by the National Pharmaceutical Pricing Authority (NPPA) will result in annual savings of about Rs 4,450 crore to patients," minister Mansukh L Mandaviya said in the Lok Sabha. TNN

### ವೃತ್ತಿಶಿಕ್ಷಣ ಕೋರ್ಸ್ ಸೀಟು ಹಂಚಿಕೆ: ಸಚಿವ ಶರಣ ಪ್ರಕಾಶ್ ಪಾಟೀಲ್ ಹೇಳಿಕೆ

# ಏಕರೂಪದ ಕೌನ್ಸೆಲಿಂಗ್‌ಗೆ ನಿಯಮ ತಿದ್ದುಪಡಿ

**ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯ, ದಂತ ವೈದ್ಯ ಕೋರ್ಸ್‌ಗಳ ಸೀಟು ಹಂಚಿಕೆಗೆ ಈ ವರ್ಷದಿಂದಲೇ ಏಕರೂಪದ ಕೌನ್ಸೆಲಿಂಗ್ ನಡೆಸುವ ಸಂಬಂಧ ಈ ಬಜೆಟ್ ಅಧಿವೇಶನದಲ್ಲಿಯೇ ನಿಯಮಗಳಿಗೆ ತಿದ್ದುಪಡಿ ತರಲು ಸರಕಾರ ನಿರ್ಧರಿಸಿದೆ.

ಭಾರತೀಯ ವೈದ್ಯಕೀಯ ಪರಿಷತ್ (ಎಂಸಿಐ) ಹಾಗೂ ಕೇಂದ್ರ ಸರಕಾರ ಈ ವರ್ಷದಿಂದಲೇ ಏಕರೂಪದ ಕೌನ್ಸೆಲಿಂಗ್ ನಡೆಸಲು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿ ಅಧಿಸೂಚನೆ ಹೊರಡಿಸಿದೆ. ಇದರನ್ವಯ ಸರಕಾರಿ, ಖಾಸಗಿ ಹಾಗೂ ಡೀಮ್ಡ್ ವಿವಿಗಳ ಕೋಟಾದ ಸೀಟುಗಳನ್ನು ಹಂಚಬೇಕಾಗುತ್ತದೆ.



"ಈ ಹಿನ್ನೆಲೆಯಲ್ಲಿ ಬಜೆಟ್ ಅಧಿವೇಶನದ ವೇಳೆ ನಿಯಮಗಳಿಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ," ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ 'ವಿಕ'ಕ್ಕೆ ತಿಳಿಸಿದರು.

**ಆಡಳಿತ ಮಂಡಳಿ ಜತೆ ಸಭೆ:** "ಇದಕ್ಕೂ ಮುನ್ನ ಖಾಸಗಿ ಕಾಲೇಜು ಆಡಳಿತ ಮಂಡಳಿ ಜತೆ ಸರ್ವಸಮ್ಮತ ಒಪ್ಪಂದ ಮಾಡಿಕೊಳ್ಳಲು ಬುಧವಾರ (ಮಾ. 15) ಕೂಡ ಖಾಸಗಿ ಕಾಲೇಜು ಮಂಡಳಿ ಪದಾಧಿಕಾರಿಗಳ ಜತೆ ಸಭೆ ನಡೆಸಲಾಗುತ್ತದೆ," ಎಂದು ಅವರು ಹೇಳಿದರು.

ಸುಪ್ರೀಂಕೋರ್ಟ್‌ನ ನಿರ್ದೇಶನ ಮೇರೆಗೆ ಕೇಂದ್ರ ಸರಕಾರ ಕಳೆದ ವರ್ಷ 'ನೀಟ್' ಕಡ್ಡಾಯಗೊಳಿಸಿದೆ. ಆದರೆ, ಕಳೆದ ವರ್ಷ ಸರಕಾರಿ ಕೋಟಾದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಾಗೂ ಖಾಸಗಿ ಕಾಲೇಜು ಕೋಟಾದ ಸೀಟುಗಳನ್ನು 'ಕಾಮೆಡ್-ಕೆ' ಮೂಲಕ ಹಂಚಿಕೆ ಮಾಡಲಾಗಿತ್ತು. ಆದರೆ ಈ ಬಾರಿ ಏಕರೂಪದ ಕೌನ್ಸೆಲಿಂಗ್ ಮಾಡಲೇಬೇಕಿದೆ. ಹೀಗಾಗಿ, ಪ್ರತ್ಯೇಕ ಯಾವುದೇ ಕೌನ್ಸೆಲಿಂಗ್ ನಡೆಯುವುದಿಲ್ಲ. ಈ ಸಂಬಂಧ ಎನ್‌ಐಸಿ ನೆರವು ಪಡೆದು ಸಾಫ್ಟ್‌ವೇರ್ ಕೂಡ ಅಭಿವೃದ್ಧಿಪಡಿಸಲಾಗುತ್ತದೆ," ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕ ಸಚ್ಚಿದಾನಂದ 'ವಿಕ'ಕ್ಕೆ ತಿಳಿಸಿದರು.

**ಸರಕಾರದ ನಿರ್ದೇಶನದ ಮೇರೆಗೆ ಕ್ರಮ:** ಈ ನಡುವೆ, "ವೈದ್ಯ ಹಾಗೂ ದಂತ ವೈದ್ಯ ಸೀಟುಗಳ ಹಂಚಿಕೆಗೆ ಏಕರೂಪದ ಕೌನ್ಸೆಲಿಂಗ್ ನಡೆಸಲು ಸರಕಾರದಿಂದ ಸಂದೇಶ ಬಂದಿದೆ. ಆದರೆ, ಇದುವರೆಗೆ ಯಾವುದೇ ಆದೇಶ ಹೊರಬಿದ್ದಿಲ್ಲ," ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಗಂಗಾಧರಯ್ಯ ತಿಳಿಸಿದ್ದಾರೆ.

ಸ್ನಾತಕೋತ್ತರ ವೈದ್ಯ, ದಂತ ವೈದ್ಯ ಕೋರ್ಸ್‌ಗಳ ಸೀಟು ಹಂಚಿಕೆಗೆ ಏಪ್ರಿಲ್‌ನಿಂದ ಕೌನ್ಸೆಲಿಂಗ್ ಆರಂಭವಾದರೆ, ಯುಜಿ ವೈದ್ಯ ಹಾಗೂ ದಂತ ವೈದ್ಯ ಸೀಟುಗಳ ಸೀಟುಗಳ ಹಂಚಿಕೆಗೆ ಜೂನ್‌ನಿಂದ ಕೌನ್ಸೆಲಿಂಗ್ ಪ್ರಾರಂಭವಾಗಲಿದೆ. ಆ ವೇಳೆಗೆ ಸರಕಾರ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ ಕೆಇಎಗೆ ಸ್ಪಷ್ಟ ನಿರ್ದೇಶನ ನೀಡಬೇಕಾಗುತ್ತದೆ. ರಾಜ್ಯ ಸರಕಾರದ ನಿರ್ದೇಶನದ ಮೇರೆಗೆ ಪ್ರಾಧಿಕಾರ ಸೀಟುಗಳನ್ನು ಹಂಚಿಕೆ ಮಾಡಲಿದೆ.